## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ : 421/2008***

***ಚಾಸಾ : 15***
***ಪ್ರಾಸಾ : 6***

| | |
|---|---|
| **ಹೆಸರು** | : ಸಿ ಎಸ್ ಮಾಚಯ್ಯ |
| **ತಂದೆಯ ಹೆಸರು** | : ಲೇಟ್ ಸಿ ಟಿ ಸುಬ್ಬಯ್ಯ |
| **ವಯಸ್ಸು** | : 71 ವರ್ಷ |
| **ಉದ್ಯೋಗ** | : ವಕೀಲರು |
| **ವಾಸಸ್ಥಳ** | : ವಿರಾಜಪೇಟೆ ನಗರ |

**ದಿನಾಂಕ : *29-05-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

***ಶ್ರೀ. ಎಪಿಪಿಯವರಿಂದ:-*** **ಭಾ. ದಂ. ಸಂ. *299* ರಡಿಯಲ್ಲಿ ಮುಖ್ಯ ವಿಚಾರಣೆ**

ನನಗೆ ಆರೋಪಿ ಹಾಗೂ ಅವರ ಕುಟುಂಬ ಸದಸ್ಯರ ಪರಿಚಯವಿರುತ್ತದೆ. ನಾನು ಸುಮಾರು 25 ವರ್ಷಗಳ ಹಿಂದಿನಿಂದ ಎಸ್ ಬಿ ಐ ಬ್ಯಾಂಕ್ ನಲ್ಲಿ ಪ್ಯಾನಲ್ ವಕೀಲರಾಗಿ ಕೆಲಸ ಮಾಡಿರುತ್ತೇನೆ. ಆ ಸಮಯದಲ್ಲಿ ಬ್ಯಾಂಕ್ ನವರು ನನಗೆ ಕಾನೂನು ಅಭಿಪ್ರಾಯ ಕೊಡುವ ಸಲುವಾಗಿ ನನಗೆ ದಾಖಲೆಗಳನ್ನು ನೀಡುತ್ತಿದ್ದರು. ಈ ಪ್ರಕರಣದ ಆರೋಪಿಯು ನನಗೆ ಆರ್ ಟಿ ಸಿ, ಸಿ ಆರ್ ಸಿ, ನಕ್ಷೆ, ಋಣ ಬಾರ ಪ್ರಮಾಣ ಪತ್ರ ಹಾಗೂ ಇತರ ಸಂಬಂಧಿತ ದಾಖಲೆಗಳನ್ನು ನೀಡಿದ್ದರು. ನಾನು ಸದರಿ ದಾಖಲೆಗಳ ಆಧಾರದ ಮೇಲೆ ಕಾನೂನು ಅಭಿಪ್ರಾಯ ( ಲೀಗಲ್ ಒಪಿನಿಯನ್) ನೀಡಿರುತ್ತೇನೆ. ಸದರಿ ದಾಖಲೆಗಳನ್ನು ನೀಡುವಾಗ ಆರೋಪಿಯು ಯಾವುದೇ ರೀತಿಯಲ್ಲಿ ಅನುಮಾನ ಬಾರದ ರೀತಿಯಲ್ಲಿ ಸದರಿ ದಾಖಲೆಗಳನ್ನು ಟ್ಯಾಂಪರ್ ಮಾಡಿರುತ್ತಾರೆ. ನಾನು ನೀಡಿದ ಕಾನೂನು ಅಭಿಪ್ರಾಯದ ಮೇರೆಗೆ ಆರೋಪಿಯು ಬ್ಯಾಂಕಿಗೆ ಅಡಮಾನ ಪತ್ರ ಬರೆದು ಕೊಟ್ಟು ಸಾಲ ಪಡೆದುಕೊಂಡಿರುತ್ತಾರೆ. ನಂತರ ಆತ ಸದರಿ ಸಾಲವನ್ನು ತೀರಿಸಿರುವುದಿಲ್ಲ. ನಂತರ ಬ್ಯಾಂಕ್ ನವರು ಆರೋಪಿ ನೀಡಿದ ದಾಖಲಾತಿಯ ಮೇರೆಗೆ ಕ್ಯೂರಿಟಿ ಮೆಸರ್ಸ್ ತೆಗೆದುಕೊಳ್ಳುವಂತೆ ಸೂಚಿಸಿದರು. ಆ ಪ್ರಕಾರ ನಾನು ಆರೋಪಿಯನ್ನು ಕರೆದು ಸರಿಯಾದ ದಾಖಲೆಗಳನ್ನು ಒದಗಿಸುವಂತೆ ಸೂಚಿಸಿರುತ್ತೇನೆ. ತದ ನಂತರ ಆರೋಪಿಯು ತಿದ್ದುಪಡಿ ಅಡಮಾನ ಪತ್ರವನ್ನು ಬರೆದು ಕೊಟ್ಟಿರುತ್ತಾನೆ.

ತದನಂತರವೂ ಸಹ ಆರೋಪಿಯ ಬ್ಯಾಂಕ್ ಗೆ ಸಾಲವನ್ನು ಕಟ್ಟಿರುವುದಿಲ್ಲ, ನಂತರ ಬ್ಯಾಂಕ್ ನವರು ಆರೋಪಿಯ ವಿರುದ್ಧ ಡೆಪ್ಟ ರಿಕವರಿ ಟ್ರಿಬ್ಯುನಲ್ ಮುಂದೆ ಕಾನೂನು ಕ್ರಮ ಕೈಗೊಂಡಿರುತ್ತಾರೆ. ಸದರಿ ನ್ಯಾಯಾಲಯವು ಬ್ಯಾಂಕ್ ನವರು ಸಲ್ಲಿಸಿದ ಅರ್ಜಿಯನ್ನು ಡಿಕ್ರಿ ಮಾಡಿರುತ್ತದೆ. ಸದರಿ ಆದೇಶದ ಮೇರೆಗೆ ಬ್ಯಾಂಕ್ ನವರು ಆರೋಪಿಯ ಸ್ವತ್ತನ್ನು ಇ ಆಕ್ಷನ್ ಮೂಲಕ ಹರಾಜು ಪ್ರಕ್ರಿಯೆ ನಡೆಸಿರುತ್ತದೆ. ಆದರೆ ಕಾನೂನು ತೊಡಕಿನಿಂದ ನಂತರ ಆಕ್ಷನ್ ಮಾಡಲು ಆಗಿದ್ದಿರುವುದಿಲ್ಲ ಎಂದು ವಿಚಾರ ನನಗೆ ತಿಳಿದು ಬಂದಿರುತ್ತದೆ. ಆ ಸಮಯದಲ್ಲಿ ನಾನು ಎಸ್ ಬಿ ಐ ಪ್ಯಾನಲ್ ನಿಂದ ಹೊರಗೆ ಬಂದಿರುತ್ತೇನೆ. ಸಾಕ್ಷಿಗೆ ನಿಪಿ*11*ನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಆರೋಪಿ ನೀಡಿದ ದಾಖಲೆಗಳನ್ನು ಪರಿಶೀಲಿಸಿ ನೀಡಿದ ಕಾನೂನು ಅಭಿಪಾರಯ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ*11(ಎ)* ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.